ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೨೧ನೇ ಮಾರ್ಚ್ ೧೯೯೫, ಫಾಲ್ಗುಣ, ಶಕ ೧೯೧೬

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಮಾನ್ಯ ಸಭಾಧ್ಯಕ್ಷರು : ಹಿರಿಯ ಸಮಾಜವಾದಿ ಶ್ರೀ ಮಧುಲಿಮೆಯಿ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಕೆ.ಎಲ್. ಮರಿಸ್ವಾಮಿ, ಶ್ರೀ ರಾಜಾ ಅಂಬಣ್ಣ ನಾಯಕ್, ಶ್ರೀ ಸಿ.ಎಲ್.ಪಟ್ಟಣಶೆಟ್ಟಿ, ಶ್ರೀ ಎನ್.ಕೆ. ಹುಚ್ಚಪ್ಪ, ಸುಗಮ ಸಂಗೀತಗಾರರಾದ ಮೈಸೂರು ಅನಂತಸ್ವಾಮಿ, ಹಿರಿಯ ಪತ್ರಕರ್ತರಾದ ಶ್ರೀ ವಿ. ನಾರಾಯಣಸ್ವಾಮಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

1) ಹಿರಿಯ ಸಮಾಜವಾದಿ ನಾಯಕರಾದ ಶ್ರೀ ಮಧುಲಿಮೆಯಿ ಅವರು ದಿನಾಂಕ 8-1-1995 ರಂದು ನಿಧನರಾದರು.

ಶ್ರೀಯುತರು ಸ್ವಾತಂತ್ರ್ಯ ಹೋರಾಟಕ್ಕಾಗಿ ನಾಲ್ಕು ವರ್ಷಗಳ ಕಾಲ ಸೆರೆವಾಸದಲ್ಲಿದ್ದರು. ಗೋವಾ ವಿಮೋಚನಾ ಹೋರಾಟಕ್ಕಾಗಿಯೂ ಸಹಾ ಸೆರೆವಾಸ ಅನುಭವಿಸಿದ್ದರು. ಬಿಹಾರ ರಾಜ್ಯದ ಮಾಂಗ್ಯಾರ ಕ್ಷೇತ್ರದಿಂದ 1964ರಲ್ಲಿ ಮೂರನೇ ಲೋಕಸಭೆಯ ಸದಸ್ಯರಾಗಿದ್ದರು ಹಾಗೂ ಲೋಕಸಭೆಯಲ್ಲಿ ಸಂಯುಕ್ತ ಸೋಷಲಿಸ್ಟ್ ಪಕ್ಷದ ನಾಯಕರಾಗಿಯೂ, ರಾಷ್ಟ್ರದ ಸಂಸದೀಯ ಧುರೀಣರಾಗಿ ಕಾರ್ಯನಿರ್ವಹಿಸಿರುತ್ತಾರೆ.

2) ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ.ಎಲ್. ಮರಿಸ್ವಾಮಿ ಅವರು ದಿನಾಂಕ 1-2-1995 ರಂದು ನಿಧನರಾದರು.

ಶ್ರೀಯುತರು ಆರನೇ ವಿಧಾನ ಸಭೆಗೆ ಮಂಡ್ಯ ಜಿಲ್ಲೆಯ ಮಳವಳ್ಳಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು, ಸಮಾಜ ಸೇವಕರಾಗಿದ್ದರು, ವಿದ್ಯಾರ್ಥಿಗಳ ಸಂಘಟಕರಾಗಿದ್ದರು. ವಿಧ್ಯಾರ್ಥಿಗಳಲ್ಲಿ ಶಾಂತಿ ಮತ್ತು ಸೌಹಾರ್ದತೆಗಾಗಿ ಶ್ರಮಿಸಿದವರಾಗಿರುತ್ತಾರೆ.

3) ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ರಾಜಾ ಅಂಬಣ್ಣ ನಾಯಕ್ ಅವರು ದಿನಾಂಕ 14-3-1995 ರಂದು ನಿಧನರಾದರು.

ಶ್ರೀಯುತರು ಆರನೇ ವಿಧಾನ ಸಭೆಗೆ ಮಾನ್ವಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು ಹಾಗೂ 1989ರಲ್ಲಿ ರಾಯಚೂರು ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಚುನಾಯಿತರಾಗಿದ್ದರು. ಮಾನ್ವಿಯ ಲ್ಯಾಂಡ್ ಟ್ರಿಬುನಲ್ ಸಮಿತಿಯ ಸದಸ್ಯರಾಗಿ, ರಾಯಚೂರಿನ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಹಾಗೂ ಬಡವರ ಮತ್ತು ತುಳಿತಕ್ಕೊಳಪಟ್ಟವರ ಏಳಿಗೆಗಾಗಿ ಮತ್ತು ಧರ್ಮಸಮ್ಮತ ವಿತರಣಾ ಪದ್ಧತಿಯ ಅಭಿವೃದ್ಧಿಗಾಗಿ ದುಡಿದಿರುತ್ತಾರೆ.

4) ವಿಧಾನ ಸಭೆಯ ಮಾಜಿ ಶಾಸಕರಾದ ಶ್ರೀ ಸಿ.ಎಲ್. ಪಟ್ಟಣಶೆಟ್ಟಿ ಅವರು ದಿನಾಂಕ : 17-3-1995ರಂದು ನಿಧನರಾದರು.

ಶ್ರೀಯುತರು ನಾಲ್ಕನೆಯ ವಿಧಾನಸಭೆಗೆ ಬೆಳಗಾಂ ಜಿಲ್ಲೆಯ ಬಸವನ ಬಾಗೇವಾಡಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷರಾಗಿ, ಬೆಳಗಾಂ ಕೋ-ಆಪರೇಟೀವ್ ಸ್ಪಿನ್ನಿಂಗ್ ಮಿಲ್ಸ್ ಲಿಮಿಟೆಡ್ ಉಪಾಧ್ಯಕ್ಷರಾಗಿ, ಬೆಳಗಾಂ ಕೆ.ಎಲ್.ಇ. ಸೊಸೈಟಿಯ ಸದಸ್ಯರಾಗಿ, ಬೆಳಗಾಂ ಜಿಲ್ಲೆಯ ಪುರೋಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ.

5) ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎನ್. ಕೆ. ಹುಚ್ಚಪ್ಪನವರು ದಿನಾಂಕ : 31-1-1995ರಂದು ನಿಧನರಾದರು.

ಶ್ರೀಯುತರು ಏಳನೆಯ ವಿಧಾನ ಸಭೆಗೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 33 ವರ್ಷಗಳ ಕಾಲ ನಾಗೇನಹಳ್ಳಿ ಪಂಚಾಯಿತಿ ಅಧ್ಯಕ್ಷರಾಗಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಕ್ರಿಯ ಸದಸ್ಯರಾಗಿ, ಹಾಗೂ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ ಅಲ್ಲದೆ, ರಾಷ್ಟ್ರೀಕೃತ ಬ್ಯಾಂಕುಗಳ ನಿರ್ದೇಶಕರಾಗಿಯೂ ಸಹ ಸೇವೆ ಸಲ್ಲಿಸಿರುತ್ತಾರೆ.

6)ನಮ್ಮ ರಾಜ್ಯದ ಪ್ರಸಿದ್ಧ ಸುಗಮ ಸಂಗೀತಗಾರರಾದ ಮೈಸೂರು ಅನಂತಸ್ವಾಮಿಯವರು ದಿನಾಂಕ : 9-1-1995 ರಂದು ನಿಧನರಾದರು.

ಸ್ವತಃ ರಾಗ ಸಂಯೋಜನೆ ಮತ್ತು ಗಾಯನಗಳೆರಡರಲ್ಲೂ ಪ್ರಸಿದ್ಧರಾಗಿದ್ದ ಶ್ರೀಯುತರು ರಾಜರತ್ನ ಅವರ ಕೃತಿಗಳನ್ನು ಪ್ರೊ. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಹಾಗೂ ಕುವೆಂಪುರವರ 'ಓ ನನ್ನ ಚೇತನ' ಕ್ಕೆ ಧ್ವನಿ ಸುರುಳಿಯನ್ನು ತಂದ ಹೆಗ್ಗಳಿಕೆ ಇವರದು. ರಾಜ್ಯ ಪ್ರಶಸ್ತಿ, ಅಕಾಡಮಿ ಪ್ರಶಸ್ತಿ ಪದಕಗಳು ಇವರನ್ನು ಅರಸಿ ಬಂದಿದ್ದವು. ನಾಡಿನಾದ್ಯಂತ ಸಂಚರಿಸಿ ಕಾರ್ಯಕ್ರಮ ಕೊಟ್ಟಿರುವುದಲ್ಲದೆ, ದೇಶ ವಿದೇಶಗಳಲ್ಲೂ ಕಾರ್ಯಕ್ರಮಗಳನ್ನಿತ್ತು ಸುಗಮ ಸಂಗೀತ ವಲಯದಲ್ಲೊಂದು ವಿಕ್ರಮವನ್ನು ಸೃಷ್ಟಿಸಿರುತ್ತಾರೆ.

7) ಹಿರಿಯ ಪತ್ರಕರ್ತರಾದ ಶ್ರೀ ಬಿ. ನಾರಾಯಣಸ್ವಾಮಿಯವರು ದಿನಾಂಕ : 23-2-1995 ರಂದು ನಿಧನರಾದರು.

ಕನ್ನಡ ಪ್ರಭಾ ದಿನಪತ್ರಿಕೆಯ ಕೋಲಾರ ವಿಭಾಗದ ವರದಿಗಾರರಾಗಿದ್ದ ಶ್ರೀಯುತರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಟನೆಗಾಗಿ, ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಸಕ್ರಿಯ ಸದಸ್ಯರಾಗಿ ಹಾಗೂ ಒಕ್ಕೂಟದ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಪತ್ರಿಕಾ ರಂಗಕ್ಕೆ ಹಲವಾರು ರೀತಿಯಿಂದ ಸೇವೆ ಸಲ್ಲಿಸಿರುತ್ತಾರೆ.

ಈ ಮೇಲ್ಕಂಡ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ದಿವಂಗತ ಕುಟುಂಬವರ್ಗದವರಿಗೆ ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳು

70 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿವಿಧ ಇಲಾಖೆಯಲ್ಲಿ ಹಲವಾರು ಹುದ್ದೆಗಳು ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?